ಕ್ರಮ	ಮೇಲ್ವಿಚಾರಕರ:ವಾರ್ಡನ್ ಹುದ್ದೆ ಖಾಲಿ ಇರುವ ವಿದ್ಯಾರ್ಥಿನಿಲಯಗಳ ವಿವರ	ಉಸ್ತುವಾರಿಗೆ ನಿಯೋಜಿಸಿರುವ ನೌಕರರ ಹೆಸರು
4.	ಮಂಗಳೂರು ತಾಲ್ಲೂಕು:	
1)	ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕಡಂದಲೆ	ಶ್ರೀ ದಾಮೋದರ ಪುರುಷ, (ಹೆಚ್ಚುವರಿ ಪ್ರಭಾರ), ಮೇಲ್ವಿಚಾರಕರು, ಕದ್ರಿ ವಿದ್ಯಾರ್ಥಿ ನಿಲಯ
2)	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯ, ಅಶೋಕನಗರ	ಶ್ರೀ ತಾರಾನಾಥ (ಹೆಚ್ಚುವರಿ ಪ್ರಭಾರ) ಮೇಲ್ವಿಚಾರಕರು, ಉಳ್ಳಾಲ ವಿದ್ಯಾರ್ಥಿ ನಿಲಯ.
3)	ಮೆಟ್ರಿಕ್-ನಂತರ ಬಾಲಕಿಯರ ವಿದ್ಯಾರ್ಥಿ ನಿಲಯ, ಚಿಲಂಜಿ	ಜೆಸಿಂತಾ ದಿ. ಸೋಜಾ (ಹೆಚ್ಚುವರಿ ಪ್ರಭಾರ) (10ನೇ ತರಗತಿ ಪಾಸಾದ ಅಡುಗೆಯವರು)
4)	ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಬಲ್ಮಠ	ಮಹಾಲಕ್ಷ್ಮಿ (ಹೆಚ್ಚುವರಿ ಪ್ರಭಾರ) ಶಿಕ್ಷಕಿ, ಆಶ್ರಮ ಶಾಲೆ, ಬಜ್ಪೆ
5)	ಮೆಟ್ರಿಕ್-ನಂತರದ ಬಾಲಕರ ವಿದ್ಯಾರ್ಥಿ ನಿಲಯ, (ವೃತ್ತಿಪರ), ಸುರತ್ಕಲ್.	ಶ್ರೀ ತಾರಾನಾಥ (ಹೆಚ್ಚುವರಿ ಪ್ರಭಾರ) ಮೇಲ್ವಿಚಾರಕರು, (ಉಳ್ಳಾಲ ವಿದ್ಯಾರ್ಥಿ ನಿಲಯ)
6)	ಸ್ನಾತಕೋತ್ತರ ಬಾಲಕಿಯರ ವಿದ್ಯಾರ್ಥಿ ನಿಲಯ, ಕೋಣಾಜೆ.	ಮೀನಾಕುಮಾರಿ, ಶಿಕ್ಷಕಿ, ಶಿಕ್ಷಣ ಇಲಾಖೆಯಿಂದ ನಿಯೋಜನೆ.
7)	ಸ್ನಾತಕೋತ್ತರ ಬಾಲಕರ ವಿದ್ಯಾರ್ಥಿ ನಿಲಯ ಕೋಣಾಜೆ.	ಸದಾರಾಮ (ಹೆಚ್ಚುವರಿ ಪ್ರಭಾರ) ಮೇಲ್ವಿಚಾರಕರು, ಸುಂಕದಕಟ್ಟೆ ವಿದ್ಯಾರ್ಥಿನಿಲಯ

ಸರ್ವಋತು ಮೀನುಗಾರಿಕಾ ಬಂದರು

261(2250): ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಒಂದು ಸಾವಿರ ಯಾಂತ್ರಿಕೃತ ಮೀನುಗಾರಿಕಾ ಬೋಟುಗಳು ಮಂಗಳೂರು ಕೇಂದ್ರವಾಗಿ ಮೀನುಗಾರಿಕೆ ಮಾಡುತ್ತಿದ್ದು, ಈಗಿರುವ ಮೀನುಗಾರಿಕಾ ತಂಗುದಾಣ ತುಂಬಾ ಕಿರಿದಾಗಿದ್ದು ಇದನ್ನು ಸರ್ವಋತು ಮೀನುಗಾರಿಕೆ ಬಂದರನ್ನಾಗಿ ಮಾರ್ಪಡಿಸಲು ಯಾವಾಗ ಕ್ರಮಕೈಗೊಳ್ಳಲಾಗುವುದು ?1

ಆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ಸಾಶ್ರಯ ಯೋಜನೆಯಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ ಎಷ್ಟು ಮನೆಗಳನ್ನು ಕಟ್ಟಲಾಗಿದೆ ಮಂಜೂರು ಹಣವೆಷ್ಟು ಬಿಡುಗಡೆಯಾದ ಹಣವೆಷ್ಟು 3 ವರ್ಷಗಳ ಸಂಪೂರ್ಣ ವಿವರಗಳನ್ನು ನೀಡುವುದು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ಸಚಿವರು)

ಅ. ಈಗಿರುವ ಮಂಗಳೂರು ಮೀನುಗಾರಿಕೆ ಬಂದರನ್ನು ಮೀನು ಹಿಡಿಯುವ ಪ್ರಕ್ರಿಯೆಯನ್ನು ನಿಷೇದಿಸಿದ ಅವಧಿಯನ್ನು ಹೊರತುಪಡಿಸಿ ಉಳಿದೆಲ್ಲಾ ಋತುಗಳಲ್ಲಿ ಉಪಯೋಗಿಸಲಾಗುತ್ತಿದೆ. ಆದರೆ ಮಂಗಳೂರಿನಲ್ಲಿ ಈಗಿರುವ ಮೀನುಗಾರಿಕೆ ಬಂದರು ಕಿರಿದಾಗಿರುವುದರಿಂದ, ಮೀನುಗಾರಿಕೆ ದಕ್ಕೆಯನ್ನು ಅಂದಾಜು ರೂ. 75.00 ಲಕ್ಷಗಳ ವೆಚ್ಚದಲ್ಲಿ ಇನ್ನೂ 60 ಮೀಟರ್ ವಿಸ್ತರಿಸಲಾಗುತ್ತಿದೆ. ಕಾಮಗಾರಿ ಪ್ರಗತಿಯಲ್ಲಿದೆ.

ಆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ಸ್ಯಾಶ್ರಯ ಯೋಜನೆಯಲ್ಲಿ ಕಳೆದ 3 ವರ್ಷಗಳಲ್ಲಿ 140 ಫಲಾನುಭವಿಗಳನ್ನು ಗುರುತಿಸಲಾಗಿದೆ. 59 ಮನೆಗಳನ್ನು ಕಟ್ಟಲಾಗಿದೆ. ರೂ. 22.50 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ರೂ. 22.50 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಕಳೆದ 3 ವರ್ಷಗಳ ವಿವರ ಈ ಕೆಳಗಿನಂತಿರುತ್ತದೆ.

ರೂ. ಲಕ್ಷಗಳಲ್ಲಿ)

ವರ್ಷ	ಗುರುತಿಸಲಾದ ಫಲಾನುಭವಿಗಳ ಸಂಖ್ಯೆ	ಕಟ್ಟಲಾದ ಮನೆಗಳ	ಮಂಜೂರಾದ ಮೊತ್ತ ಸಂಖ್ಯೆ	ಬಿಡುಗಡೆಯಾದ ಮೊತ್ತ
1999-2000	25	24	7.50	7.50
2000-2001	50	35	15.00	15.00
2001-2002	65	0	0	0.00

ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋ-ಜನರೇಷನ್ ಘಟಕ ಸ್ಥಾಪನೆ

262(2329): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋ-ಜನರೇಷನ್ ಘಟಕ ಸ್ಥಾಪಿಸಲಾಗುತ್ತಿದೆಯೇ?

ಆ. ಇದರ ಬಗೆಗಿನ ವಿವರಗಳೇನು?

ಇ. ಈ ಘಟಕವನ್ನು ನಿಗಧಿತವಾದ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮಗಳನ್ನು ರೂಪಿಸಲಾಗಿದೆಯೇ?

ಈ. ರೂಪಿಸಿದ್ದಲ್ಲಿ, ಅದರ ಬಗೆಗಿನ ಮಾಹಿತಿ ನೀಡುವುದು:

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಸಕ್ಕರೆ ಸಚಿವರು)

ಅ. ಹೌದು

ಆ. ಮೈಸೂರು ಸಕ್ಕರೆ ಕಂಪನಿ ಮಂಡ್ಯ ಇಲ್ಲಿ 28.00 ಮೆ.ವ್ಯಾ. ಸಾಮರ್ಥ್ಯದ ಕೋ-ಜನರೇಷನ್ ಘಟಕವನ್ನು ರೂ. 76.35 ಕೋಟಿ ಅಂದಾಜು ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ. ಇದರಿಂದ 19.0 ಮೆ.ವ್ಯಾ ನಷ್ಟು ವಿದ್ಯುತ್‌ಚ್ಛಕ್ತಿಯನ್ನು ಹೊರಗೆ ಮಾರುವ ಕಾರ್ಯಕ್ರಮವಿದ್ದು ಯೋಜನೆಯು ಮಾರ್ಚ್ 2003 ರಿಂದ ಕಾರ್ಯಾರಂಭ ಮಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಮಾಡಲಾಗಿದೆ. ಶೇ. 75 ಭಾಗದಷ್ಟು ಕಾಮಗಾರಿ ಕೆಲಸಗಳು ಪೂರ್ಣಗೊಂಡಿವೆ.